## 'ಸಿನಿಮಾವನ್ನು ಟೀವಿ ಓವರ್‌ಟೇಕ್ ಮಾಡಿಲ್ಲ..'

(37ನೇ ಪುಟದಿಂದ)

ಆ ಕುರ್ಚಿಯ ಪ್ರಭಾವಳಿ ಹಾಗಿದೆ. ಅತಿಥಿಗಳ ಎಲ್ಲ ಒಳ್ಳೆಯ ವಿಷಯಗಳನ್ನೂ ಒಂದೂವರೆ ನಿಮಿಷ ಹೇಳ್ತೀವಿ. ನಾನು ನಿಂತ್ಕೋತೀನಿ. ಅದು ಪ್ಲಾನ್ ಮಾಡಿದ್ದಲ್ಲ, ಆ ತರಹ ಆಗಿ ಹೋಯಿತು.

★ ಸಿನಿಮಾರಂಗದಿಂದ ಬಂದವರು ನೀವು. ಈಗ ನೋಡಿದರೆ, ಟೀವಿ ಅದಕ್ಕಿಂತಲೂ ಪವರ್‌ಫುಲ್ ಅನ್ನಿಸುತ್ತಿದೆಯಾ? ಟೀವಿ ಸಿನಿಮಾವನ್ನು ಓವರ್‌ಟೇಕ್ ಮಾಡಿದೆಯಾ?

**ರಮೇಶ್**: ಖಂಡಿತಾ ಇಲ್ಲ. ಅದು ಹಾಗಲ್ಲ, ಅದೇ ಬೇರೆ, ಇದೇ ಬೇರೆ. ಆದರೆ ಒಂದಕ್ಕೊಂದು ಪೂರಕ. ಒಂದು ರೀತಿಯಲ್ಲಿ ನಿಮ್ಮ ಪತ್ರಿಕೆ ಮತ್ತು ಆನ್‌ಲೈನ್ ಇದ್ದ ಹಾಗೆ. ಟೀವಿ ಮತ್ತು ಸಿನಿಮಾಗಳನ್ನೂ ಪ್ರತ್ಯೇಕವಾಗಿ ಇಟ್ಟುಕೊಳ್ಳಲು ಆಗದು. ನಾನು ಬರೀ ಟೀವಿ ಯಲ್ಲಿ ಷೋ ಮಾಡಿದ್ರೆ ಕಷ್ಟ. 'ಪುಷ್ಪಕ ವಿಮಾನ' ಸಿನಿಮಾನೂ ಮಾಡಬೇಕು, ಟೀವಿ ನಲ್ಲೂ ಮಾಡಬೇಕು, ಸಿನಿಮಾ ನಿರ್ದೇಶನಾನೂ ಮಾಡಬೇಕು. ಟೀವಿ ಗಿರೋ 'ರೀಚ್' ಖಂಡಿತಾ ಸಿನಿಮಾಗೆ ಇಲ್ಲ. ಆದರೆ ಅದೇ ಡೇಂಜರ್ ಕೂಡಾ. ಟೀವಿಯಲ್ಲಿ ಸ್ವಲ್ಪ ಕಳಪೆ ಕಾರ್ಯಕ್ರಮ ಮಾಡಿದ್ರೂ ನಾನು ಫಿನಿಶ್. ಭಾರೀ ಕೇರ್‌ಫುಲ್ ಆಗಿರಬೇಕು. ಸಿನಿಮಾ ಪ್ರೇಕ್ಷಕ ದುಡ್ಡು ಕೊಟ್ಟ ಕರ್ಮಕ್ಕಾದ್ರೂ ಥಿಯೇಟರ್‌ನಲ್ಲಿ ಪೂರ್ಣ ಕುಳಿತುಕೊಳ್ತಾನೆ. ಆದರೆ ಇಲ್ಲಿ ರಿಮೋಟ್ ಎಂಬ ಆಯುಧ ಅವನ ಕೈಯಲ್ಲೇ ಇರುತ್ತೆ. ಅದನ್ನು ಬಳಸದಂತೆ ನೋಡಿಕೊಳ್ಳಬೇಕು. ನನ್ನ ಗುರುಗಳಾದ ಬಾಲಚಂದರ್ ಹೇಳುತ್ತಿದ್ರು– ನೀನು ಏನಾದರೂ ಮಾಡಯ್ಯ.. ಜನಕ್ಕೆ ಬೋರ್ ಆಗದಂತೆ ನೋಡಿಕೋ. ಸ್ವಾರಸ್ಯಕರವಾಗಿ ಮಾಡು– ಅಂತ.

★ ಟೀವಿ ಷೋ ಬಳಿಕ ನೀವು ನಿಮ್ಮಲ್ಲಿ ಕಂಡುಕೊಂಡ ವ್ಯತ್ಯಾಸವೇನು?

**ರಮೇಶ್**: ವೀಕೆಂಡ್ ಷೋ ಬಳಿಕ ಯುವಜನರು ಹೆಚ್ಚು ಚಾರ್ಜ್ ಆಗಿದ್ದಾರೆ ಅನ್ಸುತ್ತೆ. ಮೊದಲೆಲ್ಲ ನನಗೆ ಫ್ಯಾಮಿಲಿ ಆಡಿಯನ್ಸ್ ಇದ್ದರು. ಆದರೆ ಈಗ ಯುವಜನರೂ ಸಾಕಷ್ಟು ಈ ಕಾರ್ಯಕ್ರಮ ನೋಡ್ತಿದಾರೆ. ಇದರ ಮಧ್ಯೆ ನಾನು 'ಬೀಹೈವ್' ಅಂತ ಒಂದು ಕಂಪೆನಿಗೆ ಬ್ರ್ಯಾಂಡ್ ಅಂಬಾಸಿಡರ್ ಆಗಿದ್ದೇನೆ. ಸಾಮಾನ್ಯ ಜಾಹೀರಾತಿನ ಬದಲು ಅವರಿಗೆ ವಿಭಿನ್ನ ವೀಡಿಯೊ ಮಾಡಿಕೊಡುತ್ತೇನೆ. ಅದು ಆನ್‌ಲೈನ್ ನಲ್ಲಿ ಬಹಳ ಜನಪ್ರಿಯವಾಗಿದೆ. ಯುವಕರನ್ನು ಹೆಚ್ಚು ಹೆಚ್ಚಾಗಿ ತಲುಪುತ್ತಿದೆ.

★ ವೀಕೆಂಡ್ ಷೋ ನಲ್ಲಿ ಅತ್ಯಂತ ಹೆಚ್ಚು ಖುಷಿ ಕೊಟ್ಟ ಎಪಿಸೋಡ್?

**ರಮೇಶ್**: ಹಾಗೆ ಹೇಳಲಾಗದು. ನನಗೆ ಎದುರಿಗೆ ಕುಳಿತವರು ಅಷ್ಟು ಚೆನ್ನಾಗಿ ಕನ್ನಡ ಮಾತನಾಡೋದು ನೋಡಿದರೆ ವಿಪರೀತ ಖುಷಿ ಆಗೋದು– ಅವರ ಬಾಯಲ್ಲಿ ಹೇಗೆ ಕನ್ನಡ ಅಷ್ಟು ಚೆನ್ನಾಗಿ ಬರುತ್ತದೆ ಅಂತ. ಉದಾಹರಣೆಗೆ ಹಿರೇಮಗಳೂರು ಕಣ್ಣನ್, ಜಯಂತ ಕಾಯ್ಕಿಣಿ, ಕೃಷ್ಣೇಗೌಡ– ಮುಂತಾದವರ ಕಾರ್ಯಕ್ರಮಗಳು ನನ್ನನ್ನು ಒಂದು ಗುಂಗಿಗೆ ಕೊಂಡೊಯ್ದವು. ನನ್ನ ಮುಂದೆ ಕುಳಿತವರು ಇಮೋಷನಲ್ ಆಗಿ ಕಣ್ಣೀರು ಹಾಕಿದಾಗ ನನಗೂ ನೋವಾಗುತ್ತೆ. ಆದರೆ ನಾನು ಅದನ್ನು ತೋರಿಸಿಕೊಳ್ಳೋದಿಲ್ಲ. ಹಿಂದೆ ಅಮೆರಿಕಾ ಅಮೆರಿಕಾ, ಅಮೃತ ವರ್ಷಿಣಿ ಸಿನಿಮಾಗಳು ಬಂದಾಗ ಜನರ ಜತೆಗೆ ಒಂದು ಅದ್ಭುತ ಕನೆಕ್ಟಿವಿಟಿ ಆಗಿತ್ತು. ಈಗ ಟೀವಿ ಷೋ ನನ್ನ ಜೀವನದಲ್ಲಿ ಅದಕ್ಕಿಂತ ಮಿಗಿಲಾದ ಕನೆಕ್ಟಿವಿಟಿ ತಂದುಕೊಟ್ಟಿದೆ ಅನ್ನಿಸುತ್ತೆ.ಇದು ಪ್ರೀತಿಯಿಂದ ರಮೇಶ್ ಮಾತ್ರವಲ್ಲ, ಸ್ಫೂರ್ತಿಯಿಂದ ರಮೇಶ್ ಕೂಡಾ ಹೌದು. ಕಾರ್ಯಕ್ರಮ ಜನರಿಗೆ 'ಮೋಟಿವೇಟ್' ಮಾಡಬೇಕು.

★ ಟೀವಿ ಯಲ್ಲಿ ನಿಮ್ಮ ಷೋ ಇನ್ನೂ ಮುಂದುವರಿಯುತ್ತೆ?

**ರಮೇಶ್**: ಹೌದು. ಸ್ವಲ್ಪ 'ಫಾರ್ಮ್ಯಾಟ್' ಬದಲಾಯಿಸೋಣ ಅಂತ ಇದೆ. ಸಾಮಾನ್ಯ ಜನರ ಜೀವನದ ಬಗ್ಗೆ ಕಾರ್ಯಕ್ರಮ ಮಾಡಬೇಕು. ಯಾರದ್ದೇ ಜೀವನವಾದರೂ ಒಂದು ಕುತೂಹಲ ಇದ್ದೇ ಇರುತ್ತೆ. ಟೀವಿ ಷೋನಲ್ಲಿ ಈಗ ಪ್ರೇಕ್ಷಕರು ಕೂತಿರುತ್ತಾರಲ್ಲ, ಅಲ್ಲಿ ಒಂದು ಗೋಲ್ಡ್ ಕ್ಲಾಸ್ ಅಂತ ಮಾಡಿ, ವಿಶೇಷ ಕುರ್ಚಿಗಳನ್ನು ಹಾಕಿ ರಾಜ್ಯದ ವಿವಿಧೆಡೆ ಸಾಧನೆಗಳನ್ನು ಮಾಡಿರುವ 20ರ ಒಳಗಿನ ಯುವಜನರನ್ನು ಕೂರಿಸಬೇಕು ಅಂತ ಆಲೋಚನೆ ಇದೆ. ಅವರನ್ನು ಒಂದು ಸಣ್ಣ ಪರಿಚಯ ಮಾಡಿಕೊಡೋದು. ಅವರಿಗೂ ನೋಡಿದವರಿಗೂ ಸ್ಫೂರ್ತಿ ಕೊಡಲಿ. ಇನ್ನೂ ಒಂದು ಐಡಿಯಾ ಏನೆಂದರೆ, ವ್ಯಕ್ತಿಕೇಂದ್ರಿತ ಸಾಧಕರ ಜತೆಗೇ ಸಾಧಕರ ಒಂದು ವೃತ್ತಿಗುಂಪನ್ನು ಪರಿಚಯಿಸೋದು. ಉದಾಹರಣೆಗೆ ಬೇರೆ ಬೇರೆ ಪ್ರದೇಶಗಳ ಸಾಧಕ ನರ್ಸ್‌ಗಳನ್ನು ಅಥವಾ ಶಿಕ್ಷಕರನ್ನು ಒಂದು ಗುಂಪಾಗಿ ಸಾಧಕರ ಸೀಟ್‌ನಲ್ಲಿ ಕೂರಿಸುವುದು. ಇದು ನನ್ನ ಐಡಿಯಾ, ಇನ್ನಷ್ಟೇ ಮಾತನಾಡಬೇಕಿದೆ.



★ ಮುಂದಾ? ಸಿನಿಮಾದ ಬಗ್ಗೆ ಹೇಳಿ...

**ರಮೇಶ್**: ಸಿನಿಮಾದ ಕೆಲಸ ಈಗ ಶುರು ಆಗಿದೆ. ಹಿಂದಿಯಲ್ಲಿ 'ಕ್ವೀನ್' ಅಂತ ಒಂದು ಸಿನಿಮಾ ಬಂದಿತ್ತು. ಹಲವು ಪ್ರಶಸ್ತಿಗಳನ್ನು ಪಡೆದ ಸಿನಿಮಾ. ಅದನ್ನು ಕನ್ನಡ ಮತ್ತು ತಮಿಳು ಎರಡೂ ಭಾಷೆಗಳಲ್ಲಿ ರಿಮೇಕ್ ಮಾಡುತ್ತಿದ್ದೇನೆ. ನಾನು ನಟನೆ ಮಾಡ್ತಿಲ್ಲ, ನಿರ್ದೇಶನ ಮಾಡುತ್ತಿದ್ದೇನೆ. ತಮಿಳಿನಲ್ಲಿ ಕಾಜೋಲ್ ಅಗರ್‌ವಾಲ್, ಕನ್ನಡದಲ್ಲಿ ಪಾರುಲ್ ಮುಖ್ಯ ಪಾತ್ರ. ಆ್ಯಮಿ ಜಾಕ್ಸನ್ ಕೂಡಾ ಇರ್ತಾರೆ. ಬಹುತೇಕ ಇಳಯರಾಜ ಸಂಗೀತ. ಜತೆಗೇ ಕನ್ನಡದಲ್ಲಿ ನಾನು ನಟಿಸುವ ಎರಡು ಸಿನಿಮಾಗಳು ಅನೌನ್ಸ್ ಆಗಲಿವೆ. ಒಂದು ಆಗಸ್ಟ್ 4ನೇ ತಾರೀಕು ಆಗಬಹುದು. ಇನ್ನೊಂದು ಪೂರ್ತಿ ಸ್ಪಷ್ಟವಾಗಿಲ್ಲ. ಅದರಲ್ಲಿ ನಾನು ಮತ್ತು ಮಿಲಿಂದ್ ಸೋಮನ್ ನಟಿಸುತ್ತಿದ್ದೇವೆ.

★ ಎಲ್ಲ ಸರಿ, 52 ಆಯಿತು, ಈ ಯೌವನದ ಗುಟ್ಟೇನು?

**ರಮೇಶ್**: " (ದೊಡ್ಡ ನಗು) ಏನೂ ಇಲ್ಲ ಗುರುವೇ.. ನಾನು ನನ್ನ ಕೆಲಸವನ್ನು ಪ್ರೀತಿಸ್ತೀನಿ, ಅದೇ ಗುಟ್ಟು. ನನ್ನ ಕೆಲವು ಗೆಳೆಯರಿದ್ದಾರೆ– ಐಟಿ ಕಂಪೆನಿಯಲ್ಲಿ, 45ಕ್ಕೆ ರಿಟೈರ್ ಆಗ್ಬೇಕು ಅಂತಾರೆ. ಆಮೇಲೆ ಸುಮ್ನೆ ಇದ್ದು ಏನ್ ಮಾಡ್ತಾರೋ..! ಕೆಲಸವಿಲ್ಲದೆ ಜನ ಹೇಗೆ ಇರ್ತಾರೆ ಅನ್ನೋದೇ ನನಗೆ ಅರ್ಥ ಆಗಲ್ಲ. ನಾನಂತೂ 24 ಇನ್‌ಟು 7, ಕೆಲಸ ಮಾಡಲು ಬಯಸುತ್ತೇನೆ.

★ 'ಬಾಹುಬಲಿ' ನೋಡಿದ್ರಲ್ವಾ.. ನಮ್ಮಲ್ಲೂ ಅಂತಹ ಸಿನಿಮಾ ಬರಬಹುದಾ?

**ರಮೇಶ್**: ಅದ್ಭುತ ಸಿನಿಮಾ ಅದು. ರಾಜಮೌಳಿ ಅವರಿಗೆ ಒಂದು ಹ್ಯಾಟ್ಸಾಫ್. ನಮ್ಮಲ್ಲೂ ಸಾಧ್ಯವಿದೆ. ಎಲ್ಲರಿಗೂ ಕನಸು ಇದೆ ಸಾರ್. ನಿಮಗೆ ಮಾಡಲು ಬರಲ್ಲ ಅಂತಲ್ಲ, ಮಾಡಬೇಕು ಅಷ್ಟೆ. ರಾಜಮೌಳಿಯ ವಿಶೇಷ ಅಂದರೆ, ಮಾಡಿ ತೋರಿಸಿದ್ದು. ಕನ್ನಡದಲ್ಲಿ ಖಂಡಿತಾ ಆಗುತ್ತೆ. ಕನ್ನಡ ಸಿನಿಮಾವೊಂದು 50 ಕೋಟಿ ರೂಪಾಯಿ ಗಳಿಕೆ ಮಾಡುತ್ತದೆ ಅಂತ ಯಾರಾದರೂ ಊಹಿಸಿದ್ರಾ? ಈಗ ಆಗಿಲ್ವಾ? ಅದಕ್ಕೆ ಅದರದ್ದೇ ಆದ ಒಂದು ತಂಡ ಕೆಲಸ ಮಾಡಬೇಕು. ಅವರ ಮೇಲೆ 'ಬೆಟ್' ಮಾಡುವ ನಿರ್ಮಾಪಕರು ಬೇಕು. ಈಗ 'ಮಹಾಭಾರತ' ಮಾಡ್ತಿದಾರಲ್ಲ..!

★ ನಿಮ್ಮ ಸುಖಸಂಸಾರದ ಬಗ್ಗೆ ಹೇಳಿ?

**ರಮೇಶ್**: ಮಗಳು ಎಂಜಿನಿಯರಿಂಗ್ ಮುಗಿಸಿ ಐಟಿ ಕಂಪೆನಿಯೊಂದರಲ್ಲಿ ಕೆಲ್ಸ ಮಾಡ್ತಿದ್ದಾಳೆ. ಎಸೆಸ್ಸೆಲ್ಸಿವರೆಗೆ ಡ್ಯಾನ್ಸ್, ನಟನೆ ಅಂತೆಲ್ಲ ಮಾಡ್ತಿದ್ದಳು. ಅದೆಲ್ಲ ಒಂದು ವಯಸ್ಸು. ಈಗ ಅವಳ ಲೋಕವೇ ಬೇರೆಯಾಗಿದೆ. ಮಗ ಕಾಮರ್ಸ್ ಸೆಕೆಂಡ್ ಪಿಯು ಮುಗಿಸಿ ಮುಂದೇನು ಮಾಡಬೇಕು ಅಂತ ಯೋಚಿಸುತ್ತಿದ್ದಾನೆ. ಅವನಿಗೆ ವೀಡಿಯೊ ಗೇಮ್ಸ್, ಡಿಸೈನಿಂಗ್ ಅಂತೆಲ್ಲ ಆಸಕ್ತಿಗಳಿವೆ. ಕಲಿಯೋಕೆ ವಿದೇಶಕ್ಕೆ ಹೋಗ್ಬೇಕು ಅಂತ ಓಡಾಡ್ತಿದಾನೆ. ನಮ್ಮ ಮನೇಲಿ ಸಿನಿಮಾದ 'ಅಫೆಕ್ಟ್' ಇಲ್ಲ, ಅಣ್ಣ ತಮ್ಮ , ಮನೆಯವ್ರು ಎಲ್ರೂ ಅಷ್ಟೆ. ಯಾವತ್ತೋ ಒಂದು ಸಲ 'ಯಾವ್ದೋ ಸಿನಿಮಾ ನಿಂದು ಬಂತಂತೆ ಹೌದಾ?' ಎನ್ನುವವರು. ಆದರೆ ಅವರಿಗೂ ವೀಕೆಂಡ್ ಟೀವಿ ಷೋ 'ರೀಚ್' ಆಗಿದೆ.